407 (340) ಶ್ರೀ ಪಾಟೀಲ್ ಎಸ್ ಎಸ್ ಮಾನ್ಯ ಗೃಹ, ಕಾನೂನು, ನ್ಯಾಯ, ಮಾನವಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ಜಿಲ್ಲೆ, ಮುಂಡರಗಿ ತಾಳ್ಲೂಕು, ಡಂಬಳ ಪೊಲೀಸ್ ಔಟ್ ಪೋಸ್ಟ್ ಅನ್ನು ಪೊಲೀಸ್ ರಾಣೆಯಾಗಿ ಮೇಲ್ದರ್ಜೆಗೇರಿಸಲಾಗುವುದೇ?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ನ್ಯಾಯ, ಮಾನವಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).

ಅ) ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ

408 (501) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) · ಮಾನ್ಯ ಶಿ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಅಭಿವೃದ್ಧಿಪಡಿಸಬೇಕಾಗಿರುವ ರಸ್ತೆಗಳನ್ನು ಸರ್ಕಾರ ಗುರುತಿಸಿದೆಯೇ, ಹೌದಾದಲ್ಲಿ ಅಂತಹ ರಸ್ತೆಗಳಾವುವು,

ಆ) ಅತ್ಯಂತ ಜರೂರಾಗಿ ಗುರುವಾಯನ ಕೆರೆ–ಉಪ್ಪಿನಂಗಡಿ ಬೆಳ್ತಂಗಡಿ–ಬಂಗಾಡಿ–ಕಿಲ್ಲೂರು–ಕಾಜೂರು–ಮಡಂತ್ಯಾರು–ಬಳ್ಳಮಂಜಕಲ್ಲೇರಿ, ವೇಣೂರು–ಅಂಡಿಂಜೆ–ನಾರಾಕಿ,ನಿಡ್ಲೆ–ಕಾಯರ್ ತಡ್ಕ–ಪುದುವೆಟ್ಟು–ಸೆರಿಯ ಹಾಗೂ ಧರ್ಮಸ್ಥಳ–ಪೆರಿಯಡ್ಕ–ತೋಟತ್ತಾಡಿ–ಕಕ್ಕಂಜಿ ರಸ್ತೆಗಳನ್ನು ಮರು ಡಾಂಬರೀಕರಣಗೊಳಿಸಿ ಸಂಚಾರಕ್ಕೆ ಯೋಗ್ಯವನ್ನಾಗಿರಿಸಲು ಸರ್ಕಾರ ತ್ವರಿತ ಕ್ರಮ ಕೈಗೊಳ್ಳುವುದೇ,

ಇ) ಕಳೆದ ಮೂರು ವರ್ಷಗಳಿಂದ ಸಿ ಆರ್ ಎಫ್ ನಬಾರ್ಡ್ ಮತ್ತಿತರ ಯೋಜನೆಗಳ ಮೂಲಕ ಮಂಜೂರಾಗಿರುವ ಅಪೂರ್ಣವಾಗಿರುವ ರಸ್ತೆಗಳನ್ನು ಪೂರ್ಣಗೊಳಿಸಲು ಸರ್ಕಾರದ ಕ್ರಮಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು ರಸ್ತೆಗಳ ವಿವರಗಳು ಅನಬಂಧ–1 ರಲ್ಲಿ ಸಲ್ಲಿಸಿದೆ

ಆ) 1 ಗುರುವಾಯನಕೆರೆ ಉಪ್ಪಿನಂಗಡಿ ರಸ್ತೆ (ರಾಜ್ಯ ಹೆದ್ದಾರಿ–118) ಈ ರಸ್ತೆಯ ಒಟ್ಟು ಉದ್ದ 20 40 ಕಿಮೀ ರಸ್ತೆಯ ಅಂದಾಜು ಮೊತ್ತವಾದ ರೂ 1475 00 ಲಕ್ಷ ಅಭಿವೃದ್ಧಿ ಕಾಮಗಾರಿಯನ್ನು ಕೆ ಆರ್ ಡಿ ಸಿ ಎಲ್

ವತಿಯಿಂದ ನಿರ್ವಹಿಸಲಾಗುವುದು ಹಾಗೂ ಸದರಿ ರಸ್ತೆಯ ದುರಸ್ಥಿ ಕಾಮಗಾರಿಯು ಟೆಂಡರ್ ಪ್ರಕ್ರಿಯೆಯಲ್ಲಿದೆ

2 ಬೆಳ್ತಂಗಡಿ ಬಂಗಾಡಿ ಕಿಲ್ಲೂರು ಕಾಜೂರು ಮಂಡಂತ್ಯಾರು ಬಳ್ಳಮಂಜಕಲ್ಲೇರಿ ರಸ್ತೆ–ಕಿಮೀ 0 00 ರಿಂದ 17 60 ಕಿಮೀ ವರೆಗೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿಯನ್ನು ರೂ 70 00 ಲಕ್ಷದಲ್ಲಿ ಪ್ರಾರಂಭಿಸಲಾಗಿದೆ

3 ವೇಣೂರು ಅಂಡಿಂಜೆ ನಾರಾವಿ ರಸ್ತೆ ಈ ರಸ್ತೆಯ ಒಟ್ಟು ಉದ್ದ 15 80 ಕಿಮೀ ಇರುತ್ತದೆ ಈ ರಸ್ತೆಯ ಕಿಮೀ 9 00 ರಿಂದ 14 80 ಕಿಮೀ ವರೆಗೆ ನವೀಕರಿಸಲು ರೂ 25 00 ಲಕ್ಷ ಮೊತ್ತದ ಕಾಮಗಾರಿಯನ್ನು ಗುತ್ತಿಗೆದಾರರಿಗೆ ಈಗಾಗಲೇ ವಹಿಸಲಾಗಿದೆ

4 ನಿಡ್ಲೆ ಕಾಯರ್ ತಡ್ಕ ಸೆರಿಯ ರಸ್ತೆ ಈ ರಸ್ತೆಯು ಪುದುವೆಟ್ಟು–ಕಾಯರ್ ತಡ್ಕ ನಿಡ್ಲೆ ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಒಟ್ಟು ಉದ್ದ 8 00 ಕಿಮೀ ಅಭಿವೃದ್ಧಿಗೆ ರೂ 85 00 ಲಕ್ಷ ಅಂದಾಜು ತಯಾರಿಸಲಾಗಿದೆ

5 ಧರ್ಮಸ್ಥಳ ಪೆರಿಯಡ್ಕ ತೋಟತ್ತಾಡಿ ಕಕ್ಕಿಂಜೆ ರಸ್ತೆ–ಈ ರಸ್ತೆಯು ಧರ್ಮಸ್ಥಳ ತೋಟತ್ತಾಡಿ ಚಿಬಿದ್ರೆ ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಒಟ್ಟು ಉದ್ದ 10 80 ಕಿಮೀ ಅಭಿವೃದ್ಧಿಗೆ ರೂ 90 00 ಲಕ್ಷ ಅಂದಾಜು ತಯಾರಿಸಲಾಗಿದೆ

ಮೇಲ್ಕಂಡ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಿ ರಸ್ತೆಯನ್ನು ಸುಸ್ಥಿತಿಯಲ್ಲಿಡಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು ಮತ್ತು ಅನುದಾನದ ಲಭ್ಯತೆಯ ಅನುಗುಣವಾಗಿ ಸದರಿ ರಸ್ತೆಗಳನ್ನು ಡಾಂಬರೀಕರಣ ಮಾಡಲಾಗುವುದು

ಇ) ಬೆಳ್ತಂಗಡಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಸಿ ಆರ್ ಎಫ್ ನಬಾರ್ಡ್ ಮತ್ತಿತರ ಯೋಜನೆಗಳಡಿಯಲ್ಲಿ ಮಂಜೂರಾಗಿದ್ದು ಅಪೂರ್ಣವಾಗಿರುವ ರಸ್ತೆಗಳ ಕೆಲಸವನ್ನು ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು

ಅನುಬಂಧ–1 ಪ್ರಶ್ನೆ ಸಂಖ್ಯೆ 501

ಬೆಳ್ತಂಗಡಿ ತಾಳ್ಲೂಕು ವ್ಯಾಪ್ತಿಯಲ್ಲಿ 104 85 ಕಿಮೀ ಉದ್ದ ಜಿಲ್ಲಾ ಮುಖ್ಯ ರಸ್ತೆ ಮತ್ತು 140 83 ಉದ್ದ ರಾಜ್ಯ ಹೆದ್ದಾರಿ ಒಳಪಟ್ಟಿರುತ್ತದೆ ರಸ್ತೆಗಳ ವಿವರಗಳು ಈ ಕೆಳಕಂಡಂತಿದೆ

1	ಮುಂಡಾಜೆ ಕಡಿರುದ್ಯಾವರ ಡಿಡುವೆ ಸಂನೆ ರಸ್ತೆ 16 50 ಕಿಮೀ ಕಿಮೀ 0 00 ರಿಂದ 16 50 ಕಿಮೀ	
2	ಮದುವೆಟ್ಟು ಕಾಯೆರ್ ತಡ್ಕ ನಿಡ್ಲೆ ರಸ್ತೆ ಕಿಮೀ 8 00 ಕಿಮೀ 0 00 ರಿಂದ 8 00 ಕಿಮೀ	
3	ಕರಾಯ ಮಂಡಂತ್ಯಾರು ರಸ್ತೆ ಕಿಮೀ 0 00 ರಿಂದ 10 80 ಕಿಮೀ 10 80 ಕಿಮೀ	
4	ಕಕ್ಕುಂಜೆ ನೆರಿಯಾ ಮದುವೆಟ್ಟು ರಸ್ತೆ ಕಿಮೀ 0 00 15 40 ಕಿಮೀ ರಿಂದ 15 40 ಕಿಮೀ	
5	ಧರ್ಮಸ್ಥಳ ತೋಟತ್ತಾಡಿ ಚಿಬಿದ್ರಿ ರಸ್ತೆ ಕಿಮೀ 10 80 ಕಿಮೀ 0 00 10 80 ಕಿಮೀ	
6	ಜೊಗ್ಗ ಉಳಿ ಕರಾಯ ರಸ್ತೆ ಕಿಮೀ 14 20 ರಿಂದ 5 65 ಕಿಮೀ 19 85 ಕಿಮೀ	
7	ಧರ್ಮಸ್ಥಳ ನ್ಹಾನಘಟ್ಟ ರಸ್ತೆ ಕಿಮೀ 0 00 ರಿಂದ 4 00 ಕಿಮೀ 4 00 ಕಿಮೀ	
8	ವೇಣೂರು ಅಂಡಿಂಜೆ ನಾರಾವಿ ರಸ್ತೆ ಕಿಮೀ 0 00 15 50 ಕಿಮೀ ರಿಂದ 15 50 ಕಿಮೀ	
9	ಬೆಳ್ತಂಗಡಿ ಕಿಲ್ಲೂರು ಕಾಜೂರು ರಸ್ತೆ ಕಿಮೀ 0 00 18 20 ಕಿಮೀ ರಿಂದ 18 20 ಕಿಮೀ	
		ಒಟ್ಟು 104 85 ಕಿಮೀ
10	ಕಡೂರು ಕಾಯಿಂಗಾಡ್ ಸಂನೆ ರಸ್ತೆ ಕಿಮೀ 99 27 45 73 ಕಿಮೀ ರಿಂದ 145 00 ಕಿಮೀ –ರಾಹೆ 64	
11	ಸುಬ್ರಹ್ಮಣ್ಯ ಉಡುಪ ರಸ್ತೆ ಕಿಮೀ 31 50 ರಿಂದ 50 90 ಕಿಮೀ 82 40 ಕಿಮೀ –ರಾಹೆ 37	
12	ಬೆಳ್ತಂಗಡಿ ಮೂಲ್ಕ ರಸ್ತೆ ಕಿಮೀ 0 00 ರಿಂದ 23 80 ಕಿಮೀ 23 80 ಕಿಮೀ– ರಾಃಎ 70	
13	ಗುರುವಾಯನಕೆರೆ ಉಪ್ಪಿನಂಗಡಿ ರಸ್ತೆ ಕಿಮೀ 0 00 20 ,40 ಕಿಮೀ ರಿಂದ 20 40 ಕಿಮೀ –ರಾಹೆ 118	
		ಒಟ್ಟು 140 83 ಕಿಮೀ

ಇವುಗಳಲ್ಲಿ ಪೈಕಿ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಈ ಕೆಳಕಂಡತ್ತ ಕ್ರಮಕೈಗೊಳ್ಳಲಾಗಿದೆ

1) ರಾಜ್ಯ ಹೆದ್ದಾರಿಗಳ ಅಭಿವೃದ್ಧಿ

ರಾಜ್ಯ ಹೆದ್ದಾರಿಗಳ ನಿರ್ವಾಹಣೆಯನ್ನು 2005–08ನೇ ಸಾಲಿಗೆ ಕೆಆರ್ ಡಿಸಿಎಲ್ ವತಿಯಿಂದ ಈ ಕೆಳಕಂಡಂತೆ ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಗೆ ಬರುವ ರಸ್ತೆ ಚಾಚುಗಳು ಡಾಂಬರೀಕರಣ ಮಾಡಲಾಗಿದೆ

1	ಕಡೂರು ಕಾಯಿಂಗಾಡ್ ಸಂಸೆ ರಸ್ತೆ ಕಿಂಇ 99 27 ರಿಂದ 145 00 ಕಿಮೀ–ರಾಹೆ 64 ಇದರಲ್ಲಿ 125 00 ರಿಂದ 145 00 ವರೆಗೆ 9 00 ಕಿಮೀ ಆಯ್ದುಭಾಗಗಳಲ್ಲಿ ರೂ 62 38 ಲಕ್ಷ ಮೊತ್ತಕ್ಕೆ ಡಾಂಬರೀಕರಣ ಮಾಡಲಾಗಿದೆ	(ಒಟ್ಟು ಕಿಮೀ	45 73
2	ಸುಬ್ರಹ್ಮಣ್ಯ ಉಡುಪಿ ರಸ್ತೆ ಕಿಮೀ 31 50 ರಿಂದ 82 40 ಕಿಮೀ –ರಾಹೆ 37 ಇದರಲ್ಲಿ 31 50 ರಿಂದ 82 40 ರವರೆಗೆ 8 50 ಕಿಮೀ ಆಯ್ದಭಾಗಗಳಲ್ಲಿ ರೂ 82 00 ಲಕ್ಷ ಮೊತ್ತಕ್ಕೆ ಡಾಂಬರೀಕರಣ ಮಾಡಲಾಗಿದೆ	(ಒಟ್ಟು ಕಿಮೀ)	50 90
3	ಬೆಳ್ತಂಗಡಿ ಮೂಲ್ಕ ರಸ್ತೆ ಕಿಮೀ 0 00 ರಿಂದ 23 80 ಕಿಮೀ–ರಾಹೆ 70 ಇದರಲ್ಲಿ 8 00 ಕಿಮೀ ಆಯ್ದುಭಾಗಗಳಲ್ಲಿ ರೂ 64 00 ಲಕ್ಷ ಮೊತ್ತಕ್ಕೆ ಡಾಂಬರೀಕರಣ ಮಾಡಲಾಗಿದೆ	(ಒಟ್ಟು ಕಿಮೀ)	23 80
4	ಗುರುವಾಯನಕೆರೆ ಉಪ್ಪಿನಂಗಡಿ ರಸ್ತೆ (ರಾಜ್ಯ ಹೆದ್ದಾರಿ–118) ಈ ರಸ್ತೆಯ ಒಟ್ಟು ಉದ್ದ 20 40 ಕಿಮೀ ಇದ್ದು ಸಮಗ್ರ ಅಭಿವೃದ್ಧಿಗೆ ರೂ 1475 00 ಲಕ್ಷ ಮೊತ್ತದ ವಿವರವಾದ ಅಂದಾಜನ್ನು ಈಗಾಗಲೇ ಕೆಆರ್‌ಡಿಸಿಎಲ್‌ಗೆ ಸಲ್ಲಿಸಲಾಗಿರುತ್ತದೆ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ		

ಇದಲ್ಲದೆ ಸದರಿ ರಸ್ತೆಯ ದುರಸ್ತಿಗಾಗಿ ಕೆಆರ್ ಡಿಸಿಎಲ್ ವತಿಯಿಂದ ರೂ 25 60 ಲಕ್ಷಕೆ ಅನುಮೋದನೆ ಆಗಿದ್ದು ಟೆಂಡರ್ ಪ್ರಕ್ರಿಯೆಯಲ್ಲಿದೆ

2) ಜಿಲ್ಲಾ ಮುಖ್ಯ ರಸ್ತೆಗಳ ಅಬಿವೃದ್ಧಿ

1 ಬೆಳ್ತಂಗಡಿ ಬಂಗಾಡಿ ಕಿಲ್ಲೂರು ಕಾಜೂರು ಮಡಂತ್ಯಾರು ಬಳ್ಳಮಂಜಕಲ್ಲೇರಿ ರಸ್ತೆ· ಕಿಮೀ 0 00 ರಿಂದ 17 60 ಕಿಮೀ ವರೆಗೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿಯನ್ನು ರೂ 70 00 ಲಕ್ಷದಲ್ಲಿ ಪ್ರಾರಂಭಿಸಲಾಗಿದೆ

2 ವೇಣೂರು ಅಂಡಿಂಜೆ ನಾರಾವಿ ರಸ್ತೆ ಈ ರಸ್ತೆಯ ಒಟ್ಟು ಉದ್ದ 15 80 ಕಿಮೀ ಇರುತ್ತದೆ ಈ ರಸ್ತೆಯ ಕಿಮೀ 9 00 ರಿಂದ ವರೆಗೆ ನವೀಕರಿಸಲು ರೂ 25 00 ಲಕ್ಷ ಮೊತ್ತದ ಕಾಮಗಾರಿಯನ್ನು ಗುತ್ತಿಗೆದಾರರಿಗೆ ಈಗಾಗಲೇ ವಹಿಸಲಾಗಿದೆ

3 ನಿಡ್ಲೆ ಕಾಯರ್ ತಡ್ಕ ಸೆರಿಯ ರಸ್ತೆ ಈ ರಸ್ತೆಯು ಪುದುವೆಟ್ಟು– ಕಾಯರ್ ತಡ್ಕ, ನಿಡ್ಲೆ ಜಿಲ್ಲಾ ಮುಖ್ಯ ರಸ್ತೆಯಾಗಿದ್ದು ಒಟ್ಟು ಉದ್ದ 8 00 ಕಿಮೀ ಅಭಿವೃದ್ಧಿಗೆ ರೂ 85 00 ಲಕ್ಷ ಅಂದಾಜನ್ನು ತಯಾರಿಸಲಾಗಿದೆ

4 ಧರ್ಮಸ್ಥಳ ಪೆರಿಯಡ್ಕ ತೋಟತ್ತಾಡಿ ಕಕ್ಕಂಜಿ ರಸ್ತೆ ಈ ರಸ್ತೆಯು ಧರ್ಮಸ್ಥಳ ತೋಟತ್ತಾಡಿ ಚಿಬಿದ್ರೆ ಜಿಲ್ಲಾ ಮುಖ್ಯ ರಸ್ತೆಯಾಗಿದ್ದು ಒಟ್ಟು ಉದ್ದ 10 80 ಕಿಮೀ ಅಭಿವೃದ್ಧಿಗೆ ರೂ 90 00 ಲಕ್ಷ ಅಂದಾಜನ್ನು ತಯಾರಿಸಲಾಗಿದೆ

5 ಬೆಳ್ತಂಗಡಿ ತಾಲ್ಲೂಕಿನಲ್ಲಿ ಕಕ್ಕಂಜದ ನೆರಿಯಾ ಪುದುವೆಟ್ಟು ರಸ್ತೆಯ ಕಿಮೀ 0 00 ರಿಂದ 7 00 ಕಿಮೀ ವರೆಗೆ ಅಭಿವೃದ್ಧಿಗೆ ರೂ 55 00 ಲಕ್ಷ ಅನುಮೋದನೆ ಮತ್ತು ಅನುದಾನ ಬಿಡುಗಡೆಗೆ ಸರ್ಕಾರಕ್ಕೆ ಸಲ್ಲಿಸಲಾಗಿದೆ (3054–12ನೇ ಹಣಕಾಸು ಯೋಜನೆಯಡಿಯಲ್ಲಿ)

6 ಬೆಳ್ತಂಗಡಿ ತಾಲ್ಲೂಕಿನಲ್ಲಿ ಮುಂಡಾಜೆ ಕದಿರುದ್ಯಾವರ ಸಿಡುಪೆ ಸಂಸೆ ರಸ್ತೆಯ ಕಿಮೀ 0 00 ರಿಂದ 16 00 ಕಿಮೀ ವರೆಗೆ ಅಭಿವೃದ್ಧಿಗೆ ರೂ 60 00 ಲಕ್ಷ ಅನುಮೋದನೆ ಮತ್ತು ಅನುದಾನ ಬಿಡುಗಡೆಗೆ ಸರ್ಕಾರಕ್ಕೆ ಸಲ್ಲಿಸಲಾಗಿದೆ (3054–12ನೇ ಹಣಕಾಸು ಯೋಜನೆಯಡಿಯಲ್ಲಿ)

ಮೇಲ್ಕಂಡ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಿ ರಸ್ತೆಯನ್ನು ಸುಸ್ಥಿತಿಯಲ್ಲಿಡಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು ಮತ್ತು ಸರ್ಕಾರದಿಂದ ಆಗಿಂದಾಗ್ಗೆ ಬಿಡುಗಡೆ ಆಗುವ ಅನುದಾನ ಅನುಗುಣವಾಗಿ ಸದರಿ ರಸ್ತೆಗಳನ್ನು ಡಾಂಬರೀಕರಣ ಮಾಡಲಾಗುವುದು